<u>ದಿನಾಂಕ **05.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಆರೋಪಿ ಪರ ವಕೀಲರಿಂದ</u>

ಬ್ಯಾಡರಹಳ್ಳಿಯಲ್ಲಿ ನಾನು ಹುಟ್ಟಿದಾಗಿನಿಂದ ಇದ್ದೇನೆ. ಪಿರ್ಯಾದುದಾರರು ನನ್ನ ಸಬಂಧಿಕರು ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯಿತಿ ಸದಸ್ಯ . ಚುನಾವಣೆ ಸಂದರ್ಬದಲ್ಲ ನನಗೆ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾಗರಾಜುರವರ ತಂದೆಯ ಸಹೋದರಿಯರು ವಿಭಾಗವನ್ನು ಕೋರಿ ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾವುದಕ್ಕಾಗಿ ಜಗಳ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಜಗಳ ಪ್ರಾರಂಭವಾಗಿ 10.30 – 11 ಗಂಟೆ ಇರಬಹುದು. ನಾನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ 11 ಗಂಟೆ ಆಗಿತ್ತು. ಜಗಳ ಆದಾಗ ಬಹಳಷ್ಟು ಜನ ಇದ್ದರು ಯಾರು ಯಾರು ಇದ್ದರು ಎಂದರೆ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆರೋಪಿಗಳು ಪಿರ್ಯಾದುದಾರರು ಮತ್ತು ಅವರ ತಂದೆಯ ವಿರುದ್ದ ದೂರು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 17.01.2019 ರಂದು ಆರೋಪಿಗಳು ಆಸ್ಪತ್ರೆಗೆ ದಾಖಲಾಗಿ ಪಿರ್ಯಾದುದಾರರ ವಿರುದ್ದ ದೂರು ದಾಖಲು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಕೇಸಿನಲ್ಲಿ ಪಿರ್ಯಾದುದಾರರು ಅಪರಾಧಿಗಳೆಂದು ಸಾಬೀತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡರು ಮೃತ ಪಟ್ಟ ನಂತರ 1 ನೇ ಆರೋಪಿ ಅವರಿಗೆ ಹೊಡೆದಿರುತ್ತಾರೆಎಂದು ಸುಳ್ಳು ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡರ ತಾಯಿ ನನ್ನ ತಾಯಿ ಅಕ್ಕ ತಂಗಿಯರು ಎಂದರೆ ಸರಿಯಲ್ಲ. 17.01.2019 ರಂದು ಜಗಳ ಆದಾಗ ನಾನು ಇರಲಿಲ್ಲ ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಹಾಗೂ ಅವರ ತಂದೆಯ ವಿರುದ್ದ ಆದಾಂತಹ ಕೇಸಿಗೆ ಪೂರಕವಾಗಿ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯವನ್ನು ಹಾಗೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಆ ದಿನ ಏನು ನಡೆದಿದೆ ಎಂದು ಗೊತ್ತಿಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.